# ರೀಮೇಕ್ ಯಥಾವತ್ತು ನಕಲಲ್ಲ

■ ರಾಘವೇಂದ್ರ ಕೆ.

## ಜಯ್ ಡಿಸೋಜಾ

ಉದಯದ 'ಸಿಂಧು ಭೈರವಿ' ವಿರಾಟ್



◆ **ತೆಲುಗು ತಮಿಳು ಟೀವಿರಂಗಕ್ಕೆ ಹೋಲಿಸಿದರೆ ಕನ್ನಡದ ಅನುಭವ ಹೇಗೆನಿಸುತ್ತದೆ?**

ಅಂತಹ ವ್ಯತ್ಯಾಸ ಏನೂ ಇಲ್ಲ. ಕನ್ನಡದಲ್ಲಿ ನಮ್ಮದು ಎನ್ನುವುದು ಬರುತ್ತದೆ. ನಮ್ಮವರೇ ನೋಡುತ್ತಿದ್ದಾರೆ ಎಂದು ಅನ್ನಿಸುತ್ತದೆ. ಹಾಗೆಂದು ಅವು ನಮ್ಮ ಸಂಪರ್ಕದಲ್ಲಿ ಇಲ್ಲ ಎಂದೇನೂ ಇಲ್ಲ. ಒಬ್ಬ ಎಂಜಿನಿಯರ್ ನಮ್ಮಲ್ಲಿ ಕೆಲಸ ಮಾಡುವುದಕ್ಕೂ ವಿದೇಶದಲ್ಲಿ ಕೆಲಸ ಮಾಡುವುದಕ್ಕೂ ಹೇಗಿರುತ್ತದೆ. ಕನ್ನಡಿಗನೊಬ್ಬ ಬೇರೆ ಬೇರೆ ಭಾಷೆಯಲ್ಲಿ ಗುರುತಿಸಿಕೊಳ್ಳುವುದು ಒಂದು ರೀತಿಯ ಹೆಮ್ಮೆ ಅನ್ನಿಸುತ್ತದೆ. ಆದರೆ ಇಲ್ಲಿ ನನ್ನ ತನ ಎನ್ನುವುದು ಕಾಡುತ್ತೆ.

◆ **ನಟ ಆಗಿದ್ದು ಹೇಗೆ?**

ಎಂಜಿನಿಯರಿಂಗ್ ಮಾಡಲು ಬೆಂಗಳೂರಿಗೆ ಬಂದೆ. ಹೀಗಿದ್ದವನು ಮಾಡೆಲಿಂಗ್ ಮಾಡಲು ಶುರುಮಾಡಿದೆ. ಕ್ರಮೇಣ ಜಾಹೀರಾತುಗಳಲ್ಲಿ ಅವಕಾಶಗಳು ಸಿಕ್ಕವು. ಅದನ್ನು ಮಾಡುತ್ತಿರುವಾಗ, ಅಭಿನಯವನ್ನು ಬೆಳೆಸಿಕೊಂಡರೆ ಇನ್ನೂ ಹೆಚ್ಚಿನ ಜಾಹೀರಾತು ಸಿಗುತ್ತವೆ ಎನ್ನುವ ಸಲಹೆ ನೀಡಿದರು. ಅದಕ್ಕಾಗಿ ನಟನೆಯ ತರಗತಿಗೆ ಸೇರಿದೆ. ಅಲ್ಲಿ ಅಭಿನಯದ ಪ್ಯಾಶನ್ ಇರುವ ಗೆಳೆಯರ ಪರಿಚಯ ಆಯಿತು. ಅವರ ಪ್ರೇರಣೆಯಿಂದ ನಟನೆಯಲ್ಲೇ ಇನ್ನೂ ಏನಾದರೂ ಮಾಡಬೇಕು ಎಂಬ ತೀವ್ರತೆ ಹೆಚ್ಚಾಯಿತು. ಹಾಗಾಗಿ ನಟನೆಯನ್ನೇ ಕಲಿಯಬೇಕು ಎನ್ನುವ ಆಸೆಯನ್ನು ಹಿಂಬಾಲಿಸಿದೆ. 2015ರಿಂದ ಆಡಿಷನ್ ನೀಡಲು ಆರಂಭಿಸಿದೆ. ಅಷ್ಟರಲ್ಲಿ ಎಂಜಿನಿಯರಿಂಗ್ ಮುಗಿದು, ಪ್ರತಿಷ್ಠಿತ ಸಂಸ್ಥೆಯಲ್ಲಿ ಕೆಲಸವೂ ಸಿಕ್ಕಿತು. ಆರು ತಿಂಗಳು ಕೆಲಸ ಮಾಡಿದೆ. ಸಿನಿಮಾ–ಸೀರಿಯಲ್ ಸೇರಿ ಸಾಕಷ್ಟು ಆಡಿಷನ್ ನೀಡಿದ್ದೆ. ಕಲರ್ಸ್ ಕನ್ನಡದಿಂದ ಕರೆ ಬಂತು. ಸಿಕ್ಕಾಪಟ್ಟೆ ಆಡಿಷನ್ ಕೊಟ್ಟವನಿಗೆ ಇದು ನೆನಪೇ ಇರಲಿಲ್ಲ. 'ಮನೆದೇವ್ರು' ನನ್ನ ವೃತ್ತಿ ಬದುಕಿಗೆ ದೊಡ್ಡ ಬ್ರೇಕ್ ನೀಡಿತು. ಅದು ಮುಗಿಯುವಷ್ಟರಲ್ಲಿ ತೆಲುಗಿಗೆ, ನಂತರ ತಮಿಳು, ಮತ್ತೆ ಕನ್ನಡಕ್ಕೆ ಬಂದೆ.

◆ **ಬಾಲಿವುಡ್ ಪ್ರಯತ್ನವನ್ನು ಮುಂದುವರಿಸಲಿಲ್ಲ ಏಕೆ?**

ಮುಂಬೈಯಲ್ಲಿ ಐದಾರು ತಿಂಗಳಿದ್ದೆ. ಸಾಕಷ್ಟು ಆಡಿಷನ್ ಕೊಟ್ಟಿದ್ದೇನೆ. ಜಾಹೀರಾತಿಗೆ ಅವಕಾಶ ಸಿಗುತ್ತಿದ್ದವು. ಕಿರುತೆರೆಗೆ ಅವಕಾಶ ಸಿಗಲಿಲ್ಲ. ಮುಂಬೈಯಲ್ಲಿ ತುಂಬ ಸ್ಪರ್ಧೆಯಿದೆ. ಮೂರು–ನಾಲ್ಕು ವರ್ಷ ಶ್ರದ್ಧೆಯಿಂದ ಪ್ರಯತ್ನ ಮಾಡಿದರೆ ಮಾತ್ರ ಸಾಧ್ಯ ಎಂದು ಅನ್ನಿಸಿತು. ಲಕ್ಷಾಂತರ ನಟರು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಸಹನೆಯಿಂದ ಕಾಯುವುದು ಅನಿವಾರ್ಯ. ಕೆಳಮಧ್ಯಮ ಕುಟುಂಬದಿಂದ ಬಂದ ನನಗೆ ತುರ್ತಾಗಿ ಕೆಲಸ ಬೇಕಿತ್ತು.

◆ **ರೀಮೇಕ್ ಕಥೆ ನಿರ್ವಹಣೆಯ ಸವಾಲುಗಳೇನು?**

ರೀಮೇಕ್ ಮಾಡುವಾಗ ಯಥಾವತ್ತು ನಕಲು ಮಾಡುವುದಿಲ್ಲ. ಮೂಲ ಕಥೆಯನ್ನು ಕನ್ನಡತನಕ್ಕೆ ಹೊಂದುವಂತೆ ಪರಿವರ್ತನೆ ಮಾಡಿರುತ್ತಾರೆ. ವೀಕ್ಷಕರು ಮತ್ತು ನಟರಿಗೂ ಅಲ್ಲಿ ಕನ್ನಡತನ ಇದೆ ಎಂದು ಅನ್ನಿಸುತ್ತದೆ. 'ಸಿಂಧು ಭೈರವಿ' ಮೂಲ ತಮಿಳು ಕಥೆ. ಅಲ್ಲಿ ಆ ಪ್ರೇಕ್ಷಕರ ನಾಡಿಯನ್ನು ಹಿಡಿಯುತ್ತದೆ. ಇದು ನಮ್ಮ ದೇಸಿ ವೀಕ್ಷಕನ ಮನದಿಂಗಿತಕ್ಕೆ ಸ್ಪಂದಿಸುತ್ತದೆ.

◆ **ಸಿಂಧು ನಿಮ್ಮ ಜಗಳದಲ್ಲಿ ರಾಕೇಶ್ ತೊಂದರೆ ಸಿಲುಕುವುದು ಏಕೆ?**

ಅದು ಹಳೆಯ ಸಂದರ್ಭ. ಅವರಿಬ್ಬರೂ ನನ್ನನ್ನು ಹಗುರವಾಗಿ ತೆಗೆದುಕೊಳ್ಳುತ್ತಾರೆ ಎನ್ನಿಸುತ್ತದೆ. ಆ ಇಬ್ಬರೂ ಆತ್ಮೀಯರಿದ್ದಾರೆ. ಅವರಿಬ್ಬರಲ್ಲಿ ಒಬ್ಬರಿಗೆ ಶಿಕ್ಷೆ ನೀಡಬೇಕು ಎನ್ನುವ ಉದ್ದೇಶ ಇತ್ತು. ಅದಾಗಿ ಸ್ವಲ್ಪ ಸಮಯದ ನಂತರ ಅವನಿಗೆ ಮತ್ತೆ ಕೆಲಸವನ್ನು ಕೊಡುತ್ತೇನೆ. ಅವಳು ಕಾಲ್ ಮಾಡಿ ಆ ಬಗ್ಗೆ ಮಾತನಾಡುತ್ತಾಳೆ. ಅದು ಕುಟುಂಬದೊಳಗಿನ ಕೆಲವೊಂದು ವಿಷಯಕ್ಕೆ ಸಂಬಂಧಿಸಿರುತ್ತದೆ.

◆ **ನೀವು ನಿರ್ದೇಶಕ ಆಗುವ ಸಂದರ್ಭ ಬಂದರೆ ಏನು ಹೇಳುತ್ತೀರಿ?**

ಆ ಬಗ್ಗೆ ಯೋಚನೆ ಮಾಡಿಲ್ಲ. ನಿರ್ದೇಶಕನಾಗಿ ಕೆಲಸ ಮಾಡಬೇಕು ಎನ್ನುವ ಆಸೆ ಇದೆ. ಬೇರೆಯವರ ನಿರ್ದೇಶನದಲ್ಲಿ ಕೆಲಸ ಮಾಡಿದ್ದೇನೆ. ನಾನೇ ನಿರ್ದೇಶಕನಾದರೆ ಆ ಕೆಲಸವನ್ನು ಹೇಗೆ ನಿರ್ವಹಿಸಿದ್ದೇನೆ ಎನ್ನುವುದನ್ನು ನೋಡುವ ಕುತೂಹಲವಿದೆ. ಒಬ್ಬ ನಿರ್ದೇಶಕನಾಗಿ ಕಲಾವಿದರನ್ನು ಹೇಗೆ ನಡೆಸಿಕೊಳ್ಳುತ್ತೇನೆ ಎನ್ನುವುದೂ ಮುಖ್ಯ. ನಿರ್ದೇಶಕ ಮೊದಲು ಕಲಾವಿದರನ್ನು ಅರ್ಥಮಾಡಿಕೊಳ್ಳಬೇಕು. ಅವರ ಶಕ್ತಿ ಸಾಮರ್ಥ್ಯ, ಬಲಹೀನತೆ ಅರಿತುಕೊಳ್ಳಬೇಕು. ಕೆಲವರಲ್ಲಿ ಡೈಲಾಗ್ ಸೊರಗಿದರೆ, ಕೆಲವರಿಗೆ ನಟನೆಯಲ್ಲಿ ಆ ದೋಷ ಕಾಣಿಸುತ್ತದೆ. ಅವರು ಹೇಗಿದ್ದಾರೆ ಎನ್ನುವುದನ್ನು ಕಂಡುಕೊಂಡರೆ ಎಲ್ಲ ಅನುಕೂಲ ಆಗುತ್ತದೆ. ದೊಡ್ಡ ದೊಡ್ಡ ಡೈಲಾಗ್ ಹೇಳಲು ಕೆಲವರಿಗೆ ಕಷ್ಟ ಆಗುತ್ತದೆ. ಅದೆಲ್ಲವನ್ನು ನಿಭಾಯಿಸಿಕೊಂಡರೆ ಯಶಸ್ವಿ ನಿರ್ದೇಶಕ ಆಗಬಹುದು.

◆ **ಬಾಲ್ಯವನ್ನು ನೆನಪಿಸಿಕೊಂಡರೆ...**

ಊರು ಕುಮಟಾ. ನನಗೆ ಆಗ ಸುಮಾರು ಒಂದು ವರ್ಷ ಇರಬಹುದು. ಅಪಘಾತದಲ್ಲಿ ಅಪ್ಪ ತೀರಿ ಹೋದರು. ಮನೆಯಲ್ಲಿ ಅಕ್ಕ ನನ್ನನ್ನು ಅಮ್ಮ ಪೋಷಣೆ ಮಾಡಿದರು. ಅವರು ಓದಿರಲಿಲ್ಲ. ಜೀವನದಲ್ಲಿ ತುಂಬ ಕಷ್ಟಗಳು ಎದುರಾದವು. ಬಾಲ್ಯದಲ್ಲಿ ಒಳ್ಳೆಯ ಸ್ಮರಣೆಗಳೇನೂ ಇಲ್ಲ. ಕುಟುಂಬದಲ್ಲಿನ ಸಿಕ್ಕ ಪ್ರೀತಿಯಷ್ಟೇ ನೆನಪು. ■